# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

# ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 85 / 2015

ಪಿರ್ಯಾದುದಾರರು ಃ ಕುದೂರು ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ ಃ ಸಿದ್ದಗೊಂಡಬೀರದಾರ**

**ಚಾಸಾ ಃ- 04 / ಪ್ರಾಸಾ ಃ- 02**

| | |
|---|---|
| ಹೆಸರು | **ರತ್ನಮ್ಮ** |
| ತಂದೆಯ / ಗಂಡನ ಹೆಸರು | **ನರಸಿಂಹಮೂರ್ತಿ** |
| ವಯಸ್ಸು | **50** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಯಶವಂತಪುರ, ಬೆಂಗಳೂರು** |

**ದಿನಾಂಕಃ 12-04-2019 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ಚಾಸಾ-5 ನನ್ನ ತಂಗಿ, ಚಾಸಾ-12 ನನ್ನ ತಂಗಿಯ ಮಗಳು. ಸುಮಾರು 4 ವರ್ಷಗಳ ಹಿಂದೆ ನಾವುಗಳು ಯಡಿಯೂರಿನಲ್ಲಿರುವ ನಮ್ಮ ಚಿಕ್ಕಮ್ಮನ ಮನೆಗೆ ಹೋಗಿ ಒಂದು ದಿನ ತಂಗಿದ್ದು, ಮರು ದಿನ ಬೆಳಿಗ್ಗೆ ಯಡಿಯೂರಿನಿಂದ ಮಧ್ಯಾಹ್ನ 1 ಗಂಟೆಯ ಸಮಯದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಹತ್ತಿದ್ದು, ಮಧ್ಯಾಹ್ನ 2 ಗಂಟೆಯ ಸಮಯದಲ್ಲಿ ಸೋಲೂರು ಹಾಲಿನ ಡೈರಿ ಸರ್ಕಲ್ ಬಳಿ ಸದರಿ ಬಸ್ಸಿನ ಚಾಲಕ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಪಲ್ಟಿಯಾಗಿದ್ದು, ಅಪಘಾತದ ಬಾಬ್ತು ನನ್ನ ಕಾಲು, ಸೊಂಟ ಮತ್ತು ಮೈಕೈಗೆ ಸಾಮಾನ್ಯ ಸ್ವರೂಪದ ರಕ್ತಗಾಯವಾಗಿದ್ದು, ಚಾಸಾ-5 ರವರಿಗೆ ಬಲಗೈ, ಸೊಂಟಕ್ಕೆ ಹಾಗೂ ಮೈಕೈಗೆ ಸಾಮಾನ್ಯ ಸ್ವರೂಪದ

ರಕ್ತಗಾಯವಾಗಿದ್ದು, ಚಾಸಾ-12 ರವರಿಗೆ ಕಿವಿಗೆ ಪೆಟ್ಟಾಗಿ ಕಿವಿ ಹರಿದು ಹೋಗಿರುತ್ತದೆ ಹಾಗೂ ಬಸ್ಸಿನಲ್ಲಿದ್ದ ಹಲವರಿಗೂ ಸಹ ಸಣ್ಣಪುಟ್ಟ ಗಾಯಗಳಾಗಿರುತ್ತದೆ. ನಂತರ ನಮ್ಮಗಳನ್ನು ಸಾರ್ವಜನಿಕರು ಸೋಲೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ನಂತರ ಬಿ.ಜಿ.ಎಸ್ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇವೆ. ಅಪಘಾತದ ಪಡಿಸಿದ ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಗುರುತಿಸಲು ಹಾಗೂ ಚಾಲಕನನ್ನು ನೋಡಿ ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ, ಆದ ಕಾರಣ ಕೆ.ಎಸ್.ಆರ್.ಟಿ.ಸಿ. ಬಸ್ ಹಾಗೂ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿಯುತ್ತಾರೆ. ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಒಪ್ಪಿಗೆ ಮೇರೆಗೆ ಎಂ.ಓ-1 ಎಂದು ಗುರುತಿಸಲಾಯಿತು. ಅಪಘಾತಕ್ಕೆ ಆರೋಪಿ ಚಾಲಕನ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆ ಕಾರಣವಾಗಿರುತ್ತದೆಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಾಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಅಪಘಾತದ ದಿನ ದಿನಾಂಕಃ 21-04-2014 ಎಂದರೆ ಸರಿ. ಅಪಘಾತದ ದಿವಸ ನಾವು ಪ್ರಯಾಣಿಸುತ್ತಿದ್ದ ಬಸ್ ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆಃ ಕೆಎ-13-ಎಫ್-1882 ಎಂದರೆ ಸರಿ.

**ಪಾಟೀ ಸವಾಲು** ಃ- **ಶ್ರೀ. ಜಿ.ಎನ್.ಎಸ್.** ವಕೀಲರಿಂದ **ಆರೋಪಿ** ಪರವಾಗಿ ಃ-

ಯಡಿಯೂರಿನಿಂದ ಸೋಲೂರು ಸುಮಾರು 30 ಕಿ.ಮೀ. ಅಂತರವಿರುತ್ತದೆಂದರೆ ಸರಿ. ಅಪಘಾತ ಎಷ್ಟು ಗಂಟೆಗೆ ಆಗಿರುತ್ತದೆಂದರೆ ಸಾಕ್ಷಿ ಮಧ್ಯಾಹ್ನ 1 ಗಂಟೆಯ ಸಮಯದಲ್ಲಿ ಆಗಿರುತ್ತದೆಂದು ನುಡಿಯುತ್ತಾರೆ. ಯಡಿಯೂರಿನಿಂದ

**ಸಿ.ಸಿ. ಸಂಖ್ಯೆಃ 85 / 2015**
**ಚಾಸಾ-04 / ಪ್ರಾಸಾ-02**

ಸೋಲೂರಿನವರೆಗೆ ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕ ಬಸ್ಸನ್ನು ನಿಧಾನವಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದರು ಎಂದರೆ ಸಾಕ್ಷಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ. ಸೋಲೂರು ಬಸ್ ನಿಲ್ದಾಣದಿಂದ ಸೋಲೂರು ಹಾಲಿನ ಡೈರಿ ಎಷ್ಟು ಅಂತರವಿರುತ್ತದೆಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಸೋಲೂರು ಬಸ್ ನಿಲ್ದಾಣದಿಂದ ಸೋಲೂರು ಹಾಲಿನ ಡೈರಿ ಸುಮಾರು 1 ಫರ್ಲಂಗ್ ಅಂತರವಿರುತ್ತದೆಂದರೆ ಸರಿಯಲ್ಲ. ಸಾಮಾನ್ಯವಾಗಿ ಸೋಲೂರು ಬಸ್ ನಿಲ್ದಾಣದಿಂದ ಸೋಲೂರು ಹಾಲಿನ ಡೈರಿಯವರಿಗೆ ಬಹಳಷ್ಟು ಜನ ಇರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಬಹಳಷ್ಟು ಜನ ಇರುವ ಕಾರಣ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

2. ಅಪಘಾತವನ್ನು ನೀವು ಕಣ್ಣಾರೆ ಕಂಡಿರುವುದಿಲ್ಲ ಎಂದರೆ ಸರಿಯಲ್ಲ. ಕೆ.ಎಸ್.ಆರ್.ಟಿ.ಸಿ. ಬಸ್ ನ ಎಡಭಾಗದ ಚಕ್ರ ಸ್ಫೋಟಗೊಂಡು ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಪುಟ್ ಪಾತ್ ತಲುಪಿರುತ್ತದೆಂದರೆ ಸರಿಯಲ್ಲ. ಅಪಘಾತ ಪರಿಹಾರ ಪಡೆಯಲು ಪ್ರಕರಣ ದಾಖಲಿಸಿರುತ್ತೀರಾ ಎಂದರೆ ಸರಿ. ಅಪಘಾತದ ಬಾಬ್ತು ನಾನು ಸೋಲೂರು ಹಾಲಿನ ಡೈರಿಯ ಬಳಿ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಕೆ.ಎಸ್.ಆರ್.ಟಿ.ಸಿ. ಬಸ್ ನ ಎಡಭಾಗದ ಚಕ್ರ ಸ್ಫೋಟಗೊಂಡು ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಪುಟ್ ಪಾತ್ ಇಳಿದಿದ್ದು, ನೀವು ಅಪಘಾತ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**